## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

## ಸಿ.ಸಿ. ಸಂಖ್ಯೆಃ **504/2024**

ಪಿರ್ಯಾದಿ : ರಾಜ್ಯ, ಪರವಾಗಿ ಆಲ್ದೂರು ಪೊಲೀಸ್ ಠಾಣೆ,

ವಿರುದ್ಧ

ಆರೋಪಿತರು:
1. ಕೆ.ಕೆ.ಅಜಿತ್, ವಯಸ್ಸು 37 ವರ್ಷ,
ಬಿನ್ ಕೆ.ಇ.ಕೆಂಚೇಗೌಡ.

2. ಕೆ.ಇ.ಕೆಂಚೇಗೌಡ,
ವಯಸ್ಸು ಸುಮಾರು 74 ವರ್ಷ,
ಬಿನ್ ದಿಃ ಈರೇಗೌಡ.

3. ಕೆ.ಕೆ.ಅನಿಲ್,
ವಯಸ್ಸು ಸುಮಾರು 38 ವರ್ಷ,
ಬಿನ್ ಕೆ.ಇ.ಕೆಂಚೇಗೌಡ.

ಎಲ್ಲರ ವಾಸ: ಕುಂದೂರು ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

### ದೋಷಾರೋಪಣೆ

ಶ್ರೀ. ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

**1.** ದಿನಾಂಕಃ 16.02.2024 ರಂದು ರಾತ್ರಿ 8.00 ರ ಸಮಯದಲ್ಲಿ ಆಲ್ದೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಣಕಲ್ ಹೋಬಳಿ, ಕುಂದೂರು ಗ್ರಾಮದ ಚಾಸಾ2 ರವರ ಬಾಬ್ತು ಕುಂದೂರು ಗ್ರಾಮದ ಸರ್ವೆ ನಂ.79 ರಲ್ಲಿರುವ ಕಾಫೀ, ಅಡಿಕೆ ತೋಟಗಳಲ್ಲಿ ಇರುವ ಕಣದಲ್ಲಿ ಚಾಸಾ1 ಮತ್ತು 2 ರವರು ನಿಂತಿರುವಾಗ ಆರೋಪಿತರುಗಳಾದ ನೀವುಗಳೆಲ್ಲರೂ ಸಮಾನ ಉದ್ದೇಶದಿಂದ ಅಲ್ಲಿಗೆ ಬಂದು ನಿಮ್ಮ ಪೈಕಿ 1 ನೇ ಆರೋಪಿ ಚಾಸಾ2 ರವರನ್ನು ಅಡ್ಡಗಟ್ಟಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **341** ಸಹಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ2 ರವರಿಗೆ

ಅವಾಚ್ಯ ಶಬ್ದಗಳಿಂದ ಬೈದಿದ್ದು, 2 ನೇ ಆರೋಪಿಯಾದ ನೀವು ಚಾಸಾ1 ರವರಿಗೆ ಸೂಳೇಮುಂಡೆ, ನೀನು ಎಷ್ಟು ಜನರ ಜೊತೆ ಇದ್ದು ಬಂದಿದ್ದೀಯಾ ಎಂದು ತನಗೆ ಗೊತ್ತು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **504** ಸಹಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ2 ರವರಿಗೆ ಕೈಯಿಂದ ಕೆನ್ನೆಗೆ ಹೊಡೆದಿದ್ದು, ಆಗ ಚಾಸಾ1 ರವರ ಅಡ್ಡ ಹೋಗಿ ಏಕೆ ನನ್ನ ತಮ್ಮನಿಗೆ ಹೊಡೆಯುತ್ತೀಯಾ ಎಂದದು ಕೇಳಿದಾಗ, 1 ನೇ ಆರೋಪಿಯಾದ ನೀವು ಚಾಸಾ1 ರವರ ಕುತ್ತಿಗೆ ಹಿಡಿದು ಹಿಸುಕಿ, ಬಲಕೈಯನ್ನು ಹಿಡಿದು ಎಳೆದಾಡಿದಾಗ ಚಾಸಾ1 ರವರು ಕೈಯಲ್ಲಿ ಹಾಕಿಕೊಂಡಿದ್ದ ಬಳೆಗಳು ಕಳೆದು ಹೋಗಿ, ಅವರ ಬಲಕೈಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **323** ಸಹಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ 3 ನೇ ಆರೋಪಿಯಾದ ನೀವು ಚಾಸಾ1 ಮತ್ತು 2 ರವರಿಗೆ ನಿಮ್ಮನ್ನು ಕೋವಿಯಲ್ಲಿ ಗುಂಡು ಹಾರಿಸಿ ಸಾಯಿಸುತ್ತೇನೆಂದು ಹಾಗೂ ಚಾಸಾ3 ರವರಿಗೆ ನಿನ್ನನ್ನು ಬಿಡಲ್ಲ ಇವತ್ತಲ್ಲಾ ನಾಳೆ ನಿನ್ನನ್ನು ಗುಂಡು ಹಾರಿಸಿ ತೆಗೆಯುತ್ತೇನೆಂದು ಕೊಲೆ ಬಿದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **506** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ರಿಂದ 3 ನೇ ಆರೋಪಿತರ ಉತ್ತರಃ

(ಆರೋಪಿತರಿಗೆ ದಿನಾಂಕ 15.07.2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**Sd/-**

ಮೂಡಿಗೆರೆ
ದಿನಾಂಕಃ 15.07.2024

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.